ಅನುಬಂಧ - ೧

1995-96ನೇ ಸಾಲಿನ ಜಿಲ್ಲಾವಾರು ಕಬ್ಬಿನ ವಿಸ್ತೀರ್ಣ, ಉತ್ಪಾದನೆ ಹಾಗೂ ಉತ್ಪಾದನೆ, ಹೊಸಬೆಳೆ ಹಾಗೂ ಕೊಳೆ ಬೆಳೆ ವಿಸ್ತೀರ್ಣ ನಿಗಧಿಪಡಿಸಿರುವ ಪಟ್ಟಿ.

ಕ್ರ ಸಂ	ಜಿಲ್ಲೆ	ವಿಸ್ತೀರ್ಣ (ಪೆ)	ಉತ್ಪಾದನೆ (ಟನ್)	ಉತ್ಪಾದನೆ (ಟನ್.ಹೆ)	ಹೊಸಬೆಳೆ	ಕೂಳೆ ಬೆಳೆ
೧.	ಬೆಂಗಳೂರು (ನಗರ)	150	15600	104	90	60
೨.	ಬೆಂಗಳೂರು (ಗ್ರಾಮೀಣ)	1300	133900	103	780	520
೩.	ಕೋಲಾರ	3500	367500	105	2100	1400
೪.	ತುಮಕೂರು	1500	157500	105	900	600
೫.	ಶಿವಮೊಗ್ಗ	15000	1650000	110	9000	6000
೬.	ಚಿತ್ರದುರ್ಗ	7000	763000	109	4200	2800
೭.	ಮೈಸೂರು	16000	1760000	110	9600	6400
೮.	ಮಂಡ್ಯ	32000	3552000	111	19200	12800
೯.	ಕೊಡಗು	50	5000	100	30	20
೧೦.	ಹಾಸನ	4000	420000	105	2400	1600
೧೧.	ಚಿಕ್ಕಮಗಳೂರು	2000	208000	104	1200	800
೧೨.	ದಕ್ಷಿಣ ಕನ್ನಡ	3000	309000	103	1800	1200
೧೩.	ಧಾರವಾಡ	5000	525000	105	3000	2000
೧೪.	ಉತ್ತರ ಕನ್ನಡ	2500	257500	103	1500	1000
೧೫.	ಬೆಳಗಾಂ	90000	90000000	100	54000	36000
೧೬.	ಬಿಜಾಪುರ	40000	4032000	101	24000	16000
೧೭.	ರಾಯಚೂರು	5200	560000	108	3120	2050
೧೮.	ಬಳ್ಳಾರಿ	5000	540000	108	3000	2000
೧೯.	ಗುಲ್ಬರ್ಗಾ	5000	520000	104	3000	2000
೨೦.	ಬೀದರ್	15000	1560000	104	9000	6000
	ಒಟ್ಟು	**253000**	**26336000**	**104**	**151800**	**101200**

ಸಿರ್ಸಿ ನೀರು ಸರಬರಾಜು ಯೋಜನೆ

135 - ಶ್ರೀ ಪಿ.ಎಸ್. ಜಯಮಂತ (ಸಿರ್ಸಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಿರಸಿ ನಗರದ ಎನೇ ಹಂತದ ನೀರು ಸರಬರಾಜು ಯೋಜನೆ ಯಾವ ಹಂತದಲ್ಲಿದೆ?

ಆ) ಇಲ್ಲಿಯವರೆಗೆ ಎನೇ ಯೋಜನೆಗೆ ಆದ ಖರ್ಚು ವೆಚ್ಚ ಎಷ್ಟು ?

ಇ) ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಭೀಮನ ಗುಡ್ಡದ ೧.೦೦ ಲಕ್ಷ ಗ್ಯಾಲನ್ ಸಾರ್ಮರ್ಥ್ಯ ಭೂಮಟ್ಟದ ಜಲಸಂಗ್ರಹಾಗಾರ ನಿರ್ಮಾಣ ಕೆಲಸ ಹೊರತುಪಡಿಸಿ ಉಳಿದ ಎಲ್ಲಾ ಕೆಲಸಗಳು ಪೂರ್ಣಗೊಂಡು ೧೯೯೩ರಲ್ಲಿ ಪುರಸಭೆಗೆ ನಿರ್ವಹಣೆಗೆ ಬಿಟ್ಟುಕೊಡಲಾಗಿದೆ.

ಆ) ಜುಲೈ ೧೯೯೫ ರವರೆಗೆ ರೂ. ೧೧೨.೯೮ ಲಕ್ಷಗಳು

ಇ) ಮಾರ್ಚ್ ೧೯೯೬ಕ್ಕೆ ಪೂರ್ಣಗೊಳಿಸಲಾಗುವುದು.

ನಗರಸಭೆ, ಪುರಸಭೆಗಳ ಚುನಾವಣೆ ಕುರಿತು

561 - ಶ್ರೀ ಅರಗ ಜ್ಞಾನೇಂದ್ರ, (ತೀರ್ಥಹಳ್ಳಿ) : ಮಾನ್ಯ ನಗರಾಭಿವೃದ್ಧಿ, ಕಾಡಾ, ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುರಸಭೆ:ನಗರಸಭೆ ಮತ್ತು ನಗರಪಾಲಿಕೆಗಳ ಚುನಾವಣೆಗಳನ್ನು ಸರ್ಕಾರದವರು ಯಾವಾಗ ನಡೆಸಲು ನಿರ್ಧರಿಸಿದ್ದಾರೆ?

ಆ) ಅವಧಿ ಮುಗಿಯುತ್ತಿದ್ದಂತೆ ಚುನಾವಣೆ ನಡೆಸದಿರುವ ಕಾರಣವೇನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ,ಕಾಡಾ, ಕರ್ನಾಟಕ ಹೈದರಾಬಾದ್ ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು):

ಅ) ನವೆಂಬರ್ ೧೯೯೫.

ಆ) ಸಂವಿಧಾನದ (೭೪ನೇ ತಿದ್ದುಪಡಿ) ಕಾಯ್ದೆ ೧೯೯೨ರ ಪ್ರಕಾರ, ಮುನ್ಸಿಪಾಲಿಟಿಗಳ ವಿಂಗಡಣೆ, ವಾರ್ಡುಗಳನ್ನು ನಿಗದಿಗೊಳಿಸುವುದು, ಚುನಾವಣಾ ನಿಯಮಗಳನ್ನು ಅಂತಿಮವಾಗಿ ರೂಪಿಸುವುದು, ಈ ಎಲ್ಲಾ ಕೆಲಸಗಳು ಸಂಪೂರ್ಣವಾಗಿರುವುದಿಲ್ಲ.

ಪುರಸಭೆಗಳಿಗೆ ಅಭಿವೃದ್ಧಿ ಅನುದಾನ

565 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ನಗರಾಭಿವೃದ್ಧಿ, ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ವಿವಿಧ ಪುರಸಭೆಗಳಿಗೆ ಅಭಿವೃದ್ಧಿ ಅನುಧಾನವನ್ನು ಯಾವ ಆಧಾರದಲ್ಲಿ ನೀಡಲಾಗುವುದು?